ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
ಆರ್.ಪಿ.ಸಂಖ್ಯೆ57
ನಮೂನೆ ಸಂಖ್ಯೆ4
(ಸಿವಿಲ್ )

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಚಿಕ್ಕಬಳ್ಳಾಪುರ.**

**ಎಸ್.ಸಿ. ಸಂಖ್ಯೆ: 77/2020**

| | |
|---|---|
| PW | 29 |
| CW | 33 |

ಸಾಕ್ಷಿಯನ್ನು ಕರೆಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ **01.12.2023**

| | | |
|---|---|---|
| ಸಾಕ್ಷಿಯ ಹೆಸರು | : | ವಿಜಯ್ ಕುಮಾರ್ ಎಂ. ವಿ |
| ತಂದೆಯ/ಗಂಡನ ಹೆಸರು | : | ಈಶ್ವರಪ್ಪ |
| ವಯಸ್ಸು | : | 29 ವರ್ಷ |
| ಉದ್ಯೋಗ | : | ಪೋಲೀಸ್ ಪೇದೆ |
| ವಾಸಸ್ಥಳ | : | ಚಿಕ್ಕಬಳ್ಳಾಪುರ |

ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದಃ

ನಾನು 2019 ರಿಂದ ಇಲ್ಲಿಯವರೆಗೆ ಚಿಕ್ಕಬಳ್ಳಾಪುರದ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಪೇದೆ ಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

1. ದಿಃ 14.09.2020 ರಂದು ವೃತ್ತ ನಿರೀಕ್ಷಕರ ಜೊತೆಯಲ್ಲಿ 1 ನೇ ಆರೋಪಿ ನವೀನ್ ಕುಮಾರ್ ರವರ ವಾಸ ಸ್ಥಳದ ಕಟ್ಟಿಗೇನಹಳ್ಳಿ ಗ್ರಾಮಕ್ಕೆ ಹೋಗಿರುತ್ತೇನೆ. ಅಲ್ಲಿ ಮೂರನೇ ಮಹಡಿಯಲ್ಲಿ ಅತನ ವಾಸದ ಮನೆ ಇದ್ದು , ಮನೆಯಲ್ಲಿ ಮೊಬೈಲ್ ಬಾಕ್ಸ್ ಮತ್ತು ಮನೆಯ ಹೊರಗೆ ದ್ವಿಚಕ್ರ ವಾಹನವನ್ನು ಅಮಾನತ್ತು ಪಡಿಸಿಕೊಳ್ಳುವ ಸಮಯದಲ್ಲಿ ವೃತ್ತ ನಿರೀಕ್ಷಕರ ಆದೇಶದ ಮೇರೆಗೆ ಪೊಟೋಗಳನ್ನು ತೆಗೆದಿರುತ್ತೇನೆ. ಸದರಿ ಪೊಟೋಗಳನ್ನು ಕಚೇರಿಗೆ ಒದಗಿಸಲಾದ ಸೋನಿ ಹ್ಯಾಂಡಿ ಕ್ಯಾಮ್ ಕ್ಯಾಮಾರಾದಿಂದ ತೆಗೆದಿರುತ್ತೇನೆ. ಸಾಕ್ಷಿ ಸದರಿ ಪೊಟೋಗಳನ್ನು ನೋಡಿ ಗುರುತಿಸಿದ್ದು ಅವು ನಿಪಿ -21 ಮತ್ತು 22 ಅಗಿರುತ್ತದೆ.

PW: 29 CW: 33

2) ದಿಃ 14.09.2020 ರಂದು ಎರಡು ಮತ್ತು ಮೂರನೇ ಆರೋಪಿಗಳು ಕೃತ್ಯಕ್ಕೆ ಬಳಸಿದ ದ್ವಿಚಕ್ರ ವಾಹನ ಮತ್ತು ಅವರ ಮೊಬೈಲ್ ಗಳನ್ನು ಅಮಾನತ್ತು ಪಡಿಸಿಕೊಳ್ಳುವ ಸಮಯದಲ್ಲಿ ವೃತ ನಿರೀಕ್ಷಕರ ಆದೇಶದ ಮೇರೆಗೆ ಪಂಚರ ಸಮಕ್ಷಮ ಅದೇ ಕ್ಯಾಮಾರಾದಿಂದ ಪೊಟೋಗಳನ್ನು ತೆಗೆದಿರುತ್ತೇನೆ.

3) ದಿಃ 14.09.2020 ರಂದು ಪ್ರಶಾಂತ್ ನಗರದ ಪ್ರಕೃತಿ ಶಾಲೆಯ ಹಿಂಭಾಗದ ಕೃತ್ಯ ನಡೆದ ಸ್ಥಳವಾದ ಮೃತ ನವೀನ್ ನ ಮನೆಯಲ್ಲಿ ರೂಮ್ ಒಳಗಡೆ , ರೂಮ್ ಹೊರಗಡೆ ಮತ್ತು ಮನೆಯ ಕೆಳಭಾಗದಲ್ಲಿ ಪೊಟೋಗಳನ್ನು ತೆಗೆದಿರುತ್ತೇನೆ. ಸದರಿ ಪೊಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಪೊಟೋಗಳನ್ನು ನಿಪಿ -40 ರಿಂದ 42 ಎಂದು ಗುರುತಿಸಲಾಯಿತು.

4) ದಿಃ 14.09.2020 ರಂದು 1 ನೇ ಆರೋಪಿ ಕೃತ್ಯಕ್ಕೆ ಬಳಸಿದ ಸಿಮ್ ಖರೀದಿ ಮಾಡಿದ ಸ್ಥಳವಾದ ಎಂ.ಜಿ ರಸ್ತೆಯ ಪ್ರಸನ್ನ ಮೊಬೈಲ್ ಅಂಗಡಿಯಲ್ಲಿ ಮಾಡಿದ ಪಂಚನಾಮೆ ಕಾಲದಲ್ಲಿ ಪೊಟೋಗಳನ್ನು ತೆಗೆದಿರುತ್ತೇನೆ. ಸದರಿ ಪೊಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ -25 ಎಂದು ಗುರುಸಲಾಗಿದೆ.ಸದರಿ ಎಲ್ಲಾ ಪೊಟೋಗಳನ್ನು ತೆಗೆದ ಬಗ್ಗೆ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನಿಪಿ-43 ಎಂದು, ಸಾಕ್ಷಿಯ ಸಹಿಯನ್ನು ನಿಪಿ -43(ಎ) ಎಂದು ಗುರುತಿಸಲಾಯಿತು.

**5)** ದಿಃ 18.08.2020 ರಂದು ತನಿಖಾಧಿಕಾರಿಯ ಮೌಖಿಕ ಆದೇಶದಂತೆ ಮೃತ ನವೀನ್ ನ ಮೊಬೈಲ್ ಸಂಖ್ಯೆ ಯ ಸಿಡಿಆರ್ ನ್ನು ತೆಗೆದು ವಿಶ್ಲೇಷಣೆ ಮಾಡಿ ವರದಿ ನೀಡುತ್ತೇನೆ. ಮೃತ ನವೀನ ಪೊನ್ ಸಂಖ್ಯೆ ಬಿಎಸ್ ಎನ್ ಎಲ್ ಕಂಪನಿಯ 9448717955 ಮತ್ತು ಏರ್ ಟೆಲ್ ಕಂಪನಿಯ 9900630242 ಅಗಿರುತ್ತದೆ. ಅವುಗಳ 01.01.2020 ರಿಂದ 17.08.2020 ರವರೆಗೆ ಅದರ ಸಿಡಿಆರ್

PW: 29 CW: 33

ವಿವರಗಳನ್ನು ಪಡೆದು ವಿಶ್ಲೇಷಣೆ ಮಾಡಿರುತ್ತೇನೆ. ಬಿಎಸ್ ಎನ್ ಎಲ್ ಸಿಮ್ ಗೆ ಅತಿ ಹೆಚ್ಚು ಸಂಪರ್ಕ ಹೊಂದಿರುವ 9108828704 ಮತ್ತು 9108226692 ಮೊಬೈಲ್ ಸಂಖ್ಯೆಳು ಅತಿ ಹೆಚ್ಚು ಸಂಪರ್ಕ ಹೊಂದಿರುತ್ತದೆ. ಏರ್‌ಟೆಲ್ ನ ಸಿಮ್ ಗೆ 7899153053 ಮತ್ತು 9108828704 ಮತ್ತು 9108226692 ಸಂಖ್ಯೆಗಳಿಗೆ ಅತಿ ಹೆಚ್ಚು ಸಂಪರ್ಕ ಹೊಂದಿರುತ್ತದೆ. ಸದರಿ ಮೊಬೈಲ್ ಗಳ ಎಸ್ ಡಿ ಅರ್ ಗಳನ್ನು ಪಡೆದು ನೋಡಲಾಗಿ ಸದರಿ ಮೂರು ಸಂಖ್ಯೆಗಳು ಆರೋಪಿ ದೀಪಾ ರವರ ಹೆಸರಿನಲ್ಲಿ ಇರುತ್ತದೆ.

6) ಮೂರನೇ ಆರೋಪಿಯ ಮುಾರು ಮೊಬೈಲ್ ನ ಸಂಖ್ಯೆಗಳನ್ನು ಸಿಡಿಅರ್ ವಿಶ್ಲೇಷಣೆ ಮಾಡಿದಾಗ ಸದರಿ ನಂಬರುಗಳಿಗೆ ಮೃತ ನವೀನ ಮೇಲ್ಕಂಡ ಎರಡು ನಂಬರುಗಳು ಮತ್ತು 9108480555 ನಂಬರುಗಳು ಇದ್ದ ಅತಿಹೆಚ್ಚು ಸಂಪರ್ಕ ಹೊಂದಿರುತ್ತದೆ. ಸದರಿ ನಂಬರುನ ಎಸ್ ಡಿ ಅರ್ ಪಡೆಯಲಾಗಿ ಸದರಿ ನಂಬರು 1 ನೇ ಆರೋಪಿಯ ಹೆಸರಿನಲ್ಲಿರುತ್ತದೆ.

7) 1 ನೇ ಆರೋಪಿಯ ನಂಬರುನ ಸಿಡಿಅರ್ ವಿಶ್ಲೇಷಣೆ ಮಾಡಿದಾಗ 4 ನೇ ಆರೋಪಿ ದೀಪಾ ರವರ ಮೂರು ನಂಬರುಗಳಿಂದ ಅತಿ ಹೆಚ್ಚು ಸಂಪರ್ಕ ಹೊಂದಿರುತ್ತದೆ ಮತ್ತು 9845599024 ಸಂಖ್ಯೆಯಿಂದ ಹೆಚ್ಚು ಸಂಪರ್ಕ ಹೊಂದಿರುತ್ತದೆ. ಕೃತ್ಯ ನಡೆದ ದಿನಾಂಕಃ 17.08.2020 ರಂದು ನಂಬರ್ ನಿಂದ ಸುಮಾರು 4 ಬಾರಿ 1 ನೇ ಆರೋಪಿಯ ಸಂಖ್ಯೆಗೆ ಪೋನ್ ಸಂಪರ್ಕ ಬಂದ ಕಾರಣ ಅದರ ಎಸ್ ಡಿ ಅರ್ ಪಡೆಯಲಾಗಿ ಅದು 2 ನೇ ಆರೋಪಿ ಕೃಷ್ಣಮೂರ್ತಿ ಸಂಖ್ಯೆ ಎಂದು ತಿಳಿದು ಬಂದಿರುತ್ತದೆ. ಸದರಿ 2 ನೇ ಆರೋಪಿಯ ಸಂಖ್ಯೆ ದಿಃ 17.08.2020 ರಂದು ಸಂಜೆ 4.46.41 ಸಮಯದಲ್ಲಿ ಬೆಂಗಳೂರಿನ ಬಾಗಲೂರು ಬಳಿ ಲೊಕೇಷನ್ ಇದ್ದು , ನಂತರ 5.46. 41 ಸೆ ಕೆಂಡ್ ನಲ್ಲಿ ಚಿಕ್ಕಬಳ್ಳಾಪುರದ ಎಂ. ಜಿ ರಸ್ತೆಯ ಪಿಳ್ಳಪ್ಪ ಕಾಂಪ್ಲೆಕ್ಸ್ ನಲ್ಲಿ ಲೊಕೇಷನ್ ಇರುತ್ತದೆ. ಅದೇ ದಿನ ಸಂಜೆ 7.28. 31 ರಂದು 1 ನೇ ಆರೋಪಿ ನವೀನ್ ಕುಮಾರ್ ಸಂಖ್ಯೆಗೆ ಕರೆ ಮಾಡಿದ್ದು, 2 ನೇ ಆರೋಪಿಯ ಮೊಬೈಲ್ ಲೊಕೇಷನ್ ಜಡನತಿಮ್ಮನಹಳ್ಳಿ

PW: 29 CW: 33

ಇಂಡ್ರಟ್ಟಿಯಲ್ ಏರಿಯಾ , ಚಿಕ್ಕಬಳ್ಳಾಪುರದಲ್ಲಿ ಕಂಡಬಂತು. ನಂತರ 1 ನೇ ಆರೋಪಿ ವಾಸವಾಗಿದ್ದ ಕಟ್ಟಿಗೇನಹಳ್ಳಿ ಗ್ರಾಮದಲ್ಲಿ ಮತ್ತು ಸ್ವಂತ ಸ್ಥಳವಾದ ಗುರುಕುಲನಾಗೇನಹಳ್ಳಿ ಗ್ರಾಮದಲ್ಲಿ ಟವರ್ ಡಂಪ್ ಮಾಡಲಾಗಿ ನಂಬರುಗಳನ್ನು ವಿಶ್ಲೇಷಣೆ ಮಾಡಲಾಗಿ ಎರಡು ಟವರ್ ಗಳಲ್ಲಿ ಸರಿ ಹೊಂದುವ ಒಟ್ಟು 49 ಸಂಖ್ಯೆಗಳು ಸಿಗುತ್ತವೆ.

8) 2 ನೇ ಆರೋಪಿ ಕೃಷ್ಣಮೂರ್ತಿಯ ನಂಬರುನ ಸಿಡಿಅರ್ ವಿಶ್ಲೇಷಣೆ ಮಾಡಲಾಗಿ ದಿಃ 15.08.2020 ರಂದು 2 ನೇ ಆರೋಪಿ ಮತ್ತು 1 ನೇ ಆರೋಪಿಗಳು ಮದ್ಯಾಹ್ಣ 12.10 ನಿಮಿಷದಿಂದ 12.50 ನಿಮಿಷದವರೆಗೆ ಸಿದ್ದೇಶ್ವರ ಸಮುದಾಯ ಚಿಕ್ಕಬಳ್ಳಾಪುರ ಮತ್ತು ವಾರ್ಡ್ ನಂಬರು 4 ಪ್ರಶಾಂತ್ ನಗರದಲ್ಲಿ ಲೊಕೇಷನ್ ಗಳು ಕಂಡುಬಂದಿರುತ್ತವೆ. ಟವರ್ ಡಂಪ್ ನಲ್ಲಿ ದೊರೆತ 49 ಸಂಖ್ಯೆಗಳ ಎಸ್ ಡಿ ಅರ್ ಪಡೆದು ನೋಡಲಾಗಿ ಅದರಲ್ಲಿ 8792157828 ಮೊಬೈಲ್ ಸಂಖ್ಯೆಯು 1 ನೇ ಆರೋಪಿ ನವೀನ್ ನ ಹೆಸರಿನಲ್ಲಿರುತ್ತದೆ. ಸದರಿ ಮೊಬೈಲ್ ಸಂಖ್ಯೆ ದಿಃ09.08.2020 ರಂದು ಪ್ರಾರಂಭವಾಗಿ ದಿಃ 18.08.2020 ಕ್ಕೆ ಕರೆಗಳು ಕೊನೆಗೊಂಡಿರುತ್ತದೆ. ಸದರಿ ನಂಬರ್ ಗೆ 2 ನೇ ಆರೋಪಿ ಮತ್ತು 8088541983 ಸಂಖ್ಯೆಗಳಿಗೆ ಮಾತ್ರ ಸಂಪರ್ಕ ಹೊಂದಿರುತ್ತದೆ.

9) 4 ನೇ ಆರೋಪಿ ದೀಪಾ ರವರ ವಾಸದ ಸ್ಥಳವಾದ ಮರಸನಹಳ್ಳಿ ಗ್ರಾಮದ ಮನೆಯ ಮಾಲೀಕರು ಮತ್ತು ನೆರೆ ಹೊರಯವರು ತಿಳಿಸಿದಂತೆ ದಿಃ 18.03.2020 ರಂದು ಅವರ ಮನೆಯಲ್ಲಿ ಗಲಾಟೆ ಅಗಿರುವ ಬಗ್ಗೆ ತಿಳಿಸಿದ್ದು. ಅಲ್ಲಿ 4 ನೇ ಆರೋಪಿ , ಮೃತ ನವೀನ್ ಮತ್ತು 1 ನೇ ಆರೋಪಿ ನವೀನ್ ಕುಮಾರ್ ನಡುವೆ ಗಲಾಟೆ ನಡೆದ ಬಗ್ಗೆ ಮಾಹಿತಿ ಬಂದು 1 ನೇ ಆರೋಪಿ ನಂಬರಾದ 9108480555 ಸಂಖ್ಯೆಯ ಸಿಡಿಅರ್ ನೋಡಲಾಗಿ ಸದರಿ ನಂಬರು ದಿಃ 18.03.2020 ರಂದು ಮ. 2.53 ನಿಮಿಷದಿಂದ ದಿಃ 19.03.2020 ರಂದು ಬೆಳಗಿನ ಜಾವ 3.52 ನಿಮಿಷದ ವರೆಗೆ ಮರಸನಹಳ್ಳಿಯ ಪಕ್ಕದ ಗ್ರಾಮವಾದ ಗುಂಡ್ಲಗುರ್ಕಿಯ ಸುತ್ತಮುತ್ತ ಕಾರ್ಯ ನಿರ್ವಹಿಸಿರುವುದು ಕಂಡುಬಂದಿರುತ್ತದೆ.

PW: 29 CW: 33

10) ದಿಃ 17.08.2020 ರಂದು 1 ನೇ ಆರೋಪಿ ನವೀನ್ ರವರ ಮೊಬೈಲ್ ಸಂಖ್ಯೆಯು 9.12. 09 ಸೆಕೆಂಡ್ ನಲ್ಲಿ ಕೊಲುಮೇನಹಳ್ಳಿ ಗ್ರಾಮ , ಪೊಟೋಶೆಟ್ಟಿಹಳ್ಳಿ ರಲ್ಲಿ ಲೊಕೇಷನ್ ಇದ್ದು 11.05. 47 ಸೆಕೆಂಡ್ ಗೆ ಕಟ್ಟಿಗೇನಹಳ್ಳಿ , ಯಲಹಂಕದಲ್ಲಿ ಇರುವುದು ಕಂಡುಬಂದಿರುತ್ತದೆ.

11) ದಿಃ 18.08.2020 ರಂದು ಬೆಳಗಿನ ಜಾವ 1.38.12 ಸೆಕೆಂಡ್ ಗೆ ಸದರಿ 1 ನೇ ಆರೋಪಿ ನಂಬರ್ ನಿಂದ 121 ಕಂಪನಿಯ ನಂಬರ್ ಗೆ ಕರೆ ಮಾಡಿರುವುದು ಮತ್ತು ಎರಡು ಎಸ್ ಎಮ್ ಎಸ್ ಗಳು ಬಂದಿರುವುದು ಕಂಡುಬಂದಿರುತ್ತದೆ. ಕೃತ್ಯ ನಡೆದ ಮರು ದಿನ ದಿಃ 18.08.2020 ರಂದು 1 ನೇ ಆರೋಪಿ ನವೀನ್ ರವರ ಹೊಸ ಮೊಬೈಲ್ ಸಂಖ್ಯೆ 8792157828 ಸಂಖ್ಯೆಯಿಂದ 2 ನೇ ಆರೋಪಿ ಕೃಷ್ಣಮೂರ್ತಿ ರವರಿಗೆ ಬೆಳಿಗ್ಗೆ 7.09 ನಿಮಿಷದಲ್ಲಿ ಕರೆ ಮಾಡಿ 1147 ಸೆಕೆಂಡ್ ಮತ್ತು 7.29 ನಿಮಿಷ ಸಮಯದದಲ್ಲಿ ಕರೆ ಮಾಡಿ 627 ಸೆಕೆಂಡ್ ಮಾತನಾಡಿ ಸದರಿ ಮೊಬೈಲ್ ಸಂಖ್ಯೆಯನ್ನು ಸ್ವಿಚ್ ಅಪ್ ಮಾಡಿರುತ್ತಾರೆ. ಈ ಬಗ್ಗೆ ತನಿಖಾಧಿಕಾರಿಗಳಿಗೆ ಲಿಖಿತ ನಿವೇದನೆ ನೀಡಿರುತ್ತೇನೆ. ಸದರಿ ನಿವೇದನೆಯನ್ನು ನಿಪಿ -44 ಎಂದು, ಸಾಕ್ಷಿಯ ಸಹಿಯನ್ನು ನಿಪಿ -44(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲು : ಶ್ರೀ. ಹೆಚ್ . ಆರ್ . ವಿ ವಕೀಲರಿಂದ, ಆರೋಪಿ/ ತರ ಪರವಾಗಿಃ**

12) ಪೊಟೋಗಳನ್ನು ತೆಗೆದ ಸಮಯದಲ್ಲಿ ಮಾಡಿದ ಪಂಚನಾಮೆಗಳಿಗೆ ನಾನು ಭಾಗವಹಿಸಿರುತ್ತೇನೆ. ಪಂಚನಾಮೆ ಸಮಯದಲ್ಲಿ ಪೊಟೋಗಳನ್ನು ತೆಗೆಯುವಂತೆ ಆದೇಶ ನೀಡಿದ್ದರು. ಮೊಬೈಲ್ ಬಾಕ್ಸ್ ಇದ್ದ ಸ್ಥಳದ ಪೊಟೋ ತೆಗೆಯಲಿಲ್ಲ. ನಮ್ಮ ವೃತ್ತ ನಿರೀಕ್ಷಕರ ಕಚೇರಿಗೆ ಕೊಟ್ಟ ಕ್ಯಾಮಾರಾ ಅತ್ಯಾದುನಿಕ ವಾಗಿದ್ದು ಅದರಲ್ಲಿ ಎಲ್ಲಾ ಫಿಚರ್ ಗಳು ಇರುತ್ತವೆ ಎಂದರೆ ಸರಿಯಲ್ಲ. ಸದರಿ ಕ್ಯಾಮಾರಾದಲ್ಲಿ ಪೊಟೋಗಳ ಮೇಲೆ ದಿನಾಂಕ ಬರುವ ಫಿಚರ್ ಇರಲಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಯಾವ ಜಾಗದಲ್ಲಿ ಎಷ್ಟು ಪೊಟೋಗಳನ್ನು ತೆಗೆದಿದ್ದೇನೆ ಎಂದು ಹೇಳಿರುವುದಿಲ್ಲ, ಅದರೆ ಪೊಟೋ ತೆಗೆದ

ಜಾಗಗಳು ಯಾವುದು ಎಂದು ಹೇಳಿರುತ್ತೇನೆ. ಒಟ್ಟು ಎಷ್ಟು ಮತ್ತು ಯಾವ ಜಾಗದಲ್ಲಿ ಎಷ್ಟು ಪೊಟೋಗಳನ್ನು ತೆಗೆದಿರುತ್ತೇನೆ ಎಂದುನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಪೊಟೋಗಳನ್ನು ತೆಗೆದ ಸಮಯ ಹೇಳಿರುವುದಿಲ್ಲ. ಮಹಜರುಗಳಿಗೆ ನಾನು ಸಹಿ ಮಾಡಲಿಲ್ಲ. ಮಹಜರು ಬರೆಯುವ ಮತ್ತು ಪಂಚರು ಸಹಿ ಮಾಡುವ ಪೊಟೋಗಳನ್ನು ತೆಗೆಯಲಿಲ್ಲ.

13) 1 ನೇ ಆರೋಪಿ ನವೀನ್ ಕುಮಾರ್ ರವರ ಮನೆಯಲ್ಲಿ ಎಷ್ಟು ಸಮಯ ಇದ್ದೇವು ಎಂದು ಈಗ ನೆನಪಿಲ್ಲ. ಅಲ್ಲಿಂದ ಟೌನ್ ಪೊಲೀಸ್ ಠಾಣೆಗೆ ಬಂದೆವು ಅಗ ಎಷ್ಟು ಸಮಯವಾಗಿತ್ತು ಗೊತ್ತಿಲ್ಲ. ಸಿಪಿಐ ರವರು ದಿಃ14.09.2020 ರಂದು ಪೊಟೋಗಳನ್ನು ತೆಗೆಯುವಂತೆ ಆದೇಶ ಮಾಡಿದ್ದರು. ಅ ಸಮಯದಲ್ಲಿ ನಾನು ಕ್ರೈಂ ಕರ್ತವ್ಯದಲ್ಲಿದ್ದೆ ಪೊಟೋ ತೆಗೆದ ನಂತರ ನಾನು ಠಾಣೆಯಲ್ಲಿದ್ದೆ. ನಾನು ಯಾವುದೇ ಮಹಜರುಗಳಿಗೆ ಸಹಿ ಮಾಡಲಿಲ್ಲ. ದಿಃ 18.08.2020 ರಂದು ಮೃತ ನವೀನ್ ನ ಮೊಬೈಲ್ ನಂಬರು ನನಗೆ ಕೊಟ್ಟಿದ್ದರು. ಅ ಸಮಯದಲ್ಲಿ ಬೇರೆ ಅನುಮಾನಸ್ಪದ ಸಂಖ್ಯೆಗಳನ್ನು ಕೊಟ್ಟಿರಲಿಲ್ಲ. ಒಂದು ಟವರ್ ನ ವ್ಯಾಪ್ತಿ ಎಷ್ಟು ಎಂದು ನನಗೆ ಗೊತ್ತಿಲ್ಲ. ನನ್ನ ವರದಿಯಲ್ಲಿ ಟವರ್ ಗಳ ವ್ಯಾಪ್ತಿ ಎಷ್ಟು ಎಂದು ಹೇಳಿರುವುದಿಲ್ಲ.

14) ಮೃತ ನವೀನ್ ಕುಮಾರ್ ಮತ್ತು 4 ನೇ ಆರೋಪಿ ದೀಪಾ ರವರ ಮೊಬೈಲ್ ಸಂಪರ್ಕ ಯಾವ ಟವರ್ ನಲ್ಲಿ ಇತ್ತು ಎಂದು ನಾನು ನೋಡಿರುವುದಿಲ್ಲ, ಹೇಳಿರುವುದಿಲ್ಲ. ನನ್ನ ನಿವೇದನೆಯಲ್ಲಿ ಹೇಳಿರುವಂತೆ 1 ನೇ ಆರೋಪಿಯ ಮೊಬೈಲ್ ಸಂಖ್ಯೆಗೆ ಸಂಪರ್ಕ ಹೊಂದಿದೆ 10 ನಂಬರುಗಳು ಯಾರದು ಎಂದು ಪರಿಶೀಲನೆ ಮಾಡಿರುತ್ತೇನೆ ಅ ಬಗ್ಗೆ ನನ್ನ ವರದಿಯಲ್ಲಿ ಹೇಳಿರುವುದಿಲ್ಲ. ಸದರಿ 10 ಸಂಖ್ಯೆಗಳು ಅ ಸಮಯದಲ್ಲಿ ಯಾವ ಲೊಕೇಷನ್ ಗಳಲ್ಲಿ ಇದ್ದವು ಎಂದು ನನ್ನ ವರದಿಯಲ್ಲಿ ಹೇಳಿರುವುದಿಲ್ಲ. ಸಿಡಿಅರ್ ನಲ್ಲಿ ಮೊಾಬೈಲ್ ಗಳ ಸಂಖ್ಯೆ ಯಾರ ಹೆಸರಿನಲ್ಲಿ ಇವೆ ಎಂದು ವಿವರ ಬರುವುದಿಲ್ಲ. ಸಿಡಿಅರ್ ಗಳಲ್ಲಿ ಯಾವ ಮೊಬೈಲ್ ಸಂಖ್ಯೆಗಳು , ಯಾವ ಮೊಬೈಲ್ ಸಂಖ್ಯೆ ಸಂಪರ್ಕದಲ್ಲಿ ಇವೆ ಎಂದು ಬರುತ್ತದೆ, ಅದರೆ ಹೆಸರುಗಳು ಬರುವುದಿಲ್ಲ.

PW: 29 CW: 33

15) 9845599024 ಸಂಖ್ಯೆ 2 ನೇ ಆರೋಪಿಯದು ಎನ್ನುವ ಬಗ್ಗೆ ಸದರಿ ಸಂಖ್ಯೆಯ ಎಸ್ ಡಿ ಅರ್ ಪಡೆದ ಕಾರಣ ನನ್ನ ವರದಿಯಲ್ಲಿ ನಮೂದಿಸಿರುತ್ತೇನೆ. ಸದರಿ ವರದಿಯಲ್ಲಿ ಹೇಳಿರುವ ಮೊಬೈಲ್ ಸಂಖ್ಯೆಗಳ ಎಸ್ ಡಿ ಅರ್ ಪಡೆದಿರುತ್ತೇನೆ. 1 ನೇ ಆರೋಪಿಯ ಮೊಬೈಲ್ ಸಂಖ್ಯೆಗೆ ಸಂಪರ್ಕ ಹೊಂದಿದ್ದ ಮೊಬೈಲ್ ಸಂಖ್ಯೆಗಳು ಯಾವ ಟವರ್ ನಲ್ಲಿ ಇತ್ತು ಎಂದು ನನ್ನ ವರದಿಯಲ್ಲಿ ಹೇಳಲು ತೊಂದರೆ ಇರಲಿಲ್ಲ. ನನ್ನ ವರದಿಯಲ್ಲಿ ಯಾವುದೇ ಮೊಬೈಲ್ ಸಂಖ್ಯೆಗಳ ಐ ಎಂಇಐ ಸಂಖ್ಯೆಗಳು ಬರೆದಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೊಬೈಲ್ ಸಿಡಿಅರ್ ಗಳಲ್ಲಿ ಐಎಂಇಐ ಸಂಖ್ಯೆಗಳು ಬರುವುದಿಲ್ಲ ಎನ್ನುತ್ತಾರೆ. ಯಾವುದೇ ಸಿಮ್ ಮೊಬೈಲ್ ಇಲ್ಲದೆ ಉಪಯೋಗಿಸಲು ಅಗುವುದಿಲ್ಲ ಎಂದರೆ ಡ್ಯಾಂಗಲ್ ಹಾಕಿ ಡೇಟಾ ಬಳಸಬಹುದು , ಕಾಲ್ ಗಳಿಗೆ ಬಳಸಲು ಆಗುವುದಿಲ್ಲ ಎನ್ನುತ್ತಾರೆ. ಆರೋಪಿಗಳು ಮತ್ತು ಮೃತ ನವೀನ ಬಳಸುತ್ತಿದ್ದ ಐ ಎಂಇಐ ಸಂಖ್ಯೆಗಳನ್ನು ನನ್ನ ವರದಿಯಲ್ಲಿ ನಮೂದಿಸಿರುವುದಿಲ್ಲ.

16) ಟವರ್ ಡಂಪ್ ನಲ್ಲಿ ನಿರ್ಧಿಷ್ಟ ಸಮಯದಲ್ಲಿ ನಿರ್ಧಿಷ್ಟ ಸ್ಥಳದಲ್ಲಿ ಎಷ್ಟು ಮೊಬೈಲ್ ಗಳು ಕಾರ್ಯ ನಿರ್ವಹಿಸುತ್ತಿದ್ದೆ ಎಂದು ತಿಳಿಯಬಹುದು. ಸದರಿ ಟವರ್ ಡಂಪ್ ಟವರ್ ನ 500 ಮೀಟರ್ ಸುತ್ತಳತೆಯಲ್ಲಿ ಮಾಡಬಹುದು. ಕೃತ್ಯ ನಡೆದ ಸ್ಥಳದ ಟವರ್ ಡಂಪ್ ಮಾಡಿರುವುದಿಲ್ಲ. ಕೃತ್ಯ ನಡೆದ ಸಮಯದಲ್ಲಿ ಒಂದು ಮತ್ತು ಎರಡು ಆರೋಪಿಗಳು ಕೃತ್ಯ ನಡೆದ ಸ್ಥಳದಿಂದ ಎಷ್ಟು ದೂರದಲ್ಲಿದ್ದರು ಎಂದು ಕೇಳಿದ ಪ್ರಶ್ನೆಗೆ ಕೃತ್ಯ ನಡೆದ ಸಮಯದಲ್ಲಿ ಮೊಬೈಲ್ ಗಳು ಕಾರ್ಯ ನಿರತವಾಗಿದ್ದರೆ ಹೇಳಬಹುದು ಎನ್ನುತ್ತಾರೆ. ಕೃತ್ಯ ನಡೆದ ಸಮಯದ ಆಸುಪಾಸು 1 ಮತ್ತು 2 ನೇ ಆರೋಪಿಯ ಮೊಬೈಲ್ ಗಳು ಎಷ್ಟು ದೂರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು ಎಂದು ನನ್ನ ವರದಿಯಲ್ಲಿ ಹೇಳಿರುತ್ತೇನೆ. 1 ಮತ್ತು 2 ನೇ ಆರೋಪಿಗಳು ಮತ್ತು ನವೀನ್ ಕುಮಾರ್ ಘಟನೆಯ ಸಮಯದಲ್ಲಿ ಮ್ಯಾಕ್ಸ್ ಲೇಔಟ್ ಪ್ರಶಾಂತ್ ನಗರ , ಸಿದ್ದೇಶ್ವರ ಸಮುದಾಯ ಭವನ ದ ಟವರ್ ನ ವ್ಯಾಪ್ತಿಯಲ್ಲಿ 2 ನೇ ಅರೋಪಿ , ಗುರುಕುಲ ನಾಗೇನಹಳ್ಳಿಯ ಟವರ್ ಹತ್ತಿರ 1 ನೇ

ಆರೋಪಿ ಮತ್ತು ಮೃತ ನವೀನ್ ಮ್ಯಾಕ್ಸ್ ಲೇಔಟ್, ಪ್ರಶಾಂತ್ ನಗರದ ಟವರ್ ವ್ಯಾಪ್ತಿಯಲ್ಲಿ ಇದ್ದರು ಎಂದು ನನ್ನ ವರದಿಯಲ್ಲಿ ಹೇಳಿರುತ್ತೇನೆ.

17) ಮೃತ ನವೀನ್ ಕುಮಾರ್ ಇದ್ದ ಟವರ್ ವ್ಯಾಪ್ತಿಗೆ 1 ನೇ ಆರೋಪಿಯ ಮೊಬೈಲ್ ಸಂಖ್ಯೆ ದಿಃ 15.08.2020 ರಂದು ಕಾರ್ಯನಿರ್ವಹಿಸಿತ್ತು. ಈ ಘಟನೆಯ ಸ್ಥಳ ಯಾವ ಟೌನ್ ನ ವ್ಯಾಪ್ತಿಗೆ ಬರುತ್ತದೆ ಎಂದು ನನ್ನ ವರದಿಯಲ್ಲಿ ಹೇಳಿರುವುದಿಲ್ಲ. 1 ನೇ ಆರೋಪಿಯ ಮೊಬೈಲ್ ಸಂಖ್ಯೆಗೆ ಸಂಪರ್ಕ ಹೊಂದಿದ್ದ ಮೊಬೈಲ್ ಗಳ ಪೈಕಿ ಒಂದು ನಂಬರು ಮಾತ್ರ ಮೃತ ನವೀನ್ ಕುಮಾರ್ ಇದ್ದ ಟವರ್ ವ್ಯಾಪ್ತಿಯಲ್ಲಿ ಸಂಪರ್ಕ ಹೊಂದಿತ್ತು ಎಂದು ವರದಿಯಲ್ಲಿ ಹೇಳಿರುತ್ತೇನೆ. ಒಂದೊಂದು ಸಿಮ್ ಪ್ರೋವೈಡರ್ ಗಳ ಟವರ್ ಗಳು ಒಂದೇ ವ್ಯಾಪ್ತಿಯಲ್ಲಿದ್ದರು ಬೇರೆ, ಬೇರೆ ಸ್ಥಳಗಳಲ್ಲಿ ಇರುತ್ತದೆ ಅದ ಕಾರಣ ನಿರ್ಧಿಷ್ಟವಾಗಿ ಮೊಬೈಲ್ ಗಳ ಲೊಕೇಷನ್ ಗಳನ್ನು ಹೇಳಲು ಆಗುವುದಿಲ್ಲ. ಒಂದು ಟವರ್ ನ ವ್ಯಾಪ್ತಿ ಎಷ್ಟು ದೂರ ಇರುತ್ತದೆ ಎಂದು ನಮಗೆ ಗೊತ್ತಾಗುವುದಿಲ್ಲ.

18) ಮೃತ ನವೀನ್ ನ ಮೊಬೈಲ್ ಸಂಖ್ಯೆ 9448717955 ಸಂಖ್ಯೆಗೆ ದಿಃ18.08.2020 ರಂದು 4 ನೇ ಆರೋಪಿ ದೀಪಾ ರವರ ಸಂಖ್ಯೆ 9108828704 ಸಂಖ್ಯೆಯಿಂದ ಸಂಜೆ 18.45.13 ಸಮಯದಲ್ಲಿ ಬಂದ ಕರೆ ಕೊನೆ ಕರೆಯಾಗಿರುತ್ತದೆ. ಎರಡು ಮೊಬೈಲ್ ಸಂಖ್ಯೆಗಳು ಒಂದು ನಿರ್ಧಿಷ್ಟ ಸಮಯದಲ್ಲಿ ಯಾವ ಸ್ಥಳದಲ್ಲಿ ಇದ್ದವು ಎನ್ನುವ ಬಗ್ಗೆ ಟವರ್ ಗಳಲ್ಲಿ ಕಾಲ್ ಅಥವಾ ಎಸ್ ಎಮ್ ಎಸ್ ಬಂದಿದ್ದರೆ ಮಾತ್ರ ಮಾಹಿತಿ ಸಿಗುತ್ತದೆ. ಮೃತ ಇದ್ದ ಸ್ಥಳದ 500 ಮೀಟರ್ ವ್ಯಾಪ್ತಿಯಲ್ಲಿ ಯಾವ, ಯಾವ ಸಂಖ್ಯೆಗಳು ಕಾರ್ಯ ನಿರ್ವಹಿಸುತ್ತಿದ್ದವು ಎಂದು ಮಾಹಿತಿ ಪಡೆದಿರುವುದಿಲ್ಲ. 2 ನೇ ಆರೋಪಿಯ ಮೊಬೈಲ್ ಸಂಖ್ಯೆ ಅವರ ಹೆಸರಿನಲ್ಲಿ ಇದ್ದ ಬಗ್ಗೆ ದಾಖಲೆಯನ್ನು ನನ್ನ ವರದಿಯ ಜೊತೆ ನಾನು ಕೊಡಲು ಬರುವುದಿಲ್ಲ. ಎಸ್ ಡಿ ಅರ್ ದಾಖಲೆ ಗಳನ್ನು ಸರ್ವೀಸ್ ಪ್ರೊವೈಡರ್ ಗಳಿಂದ ಇ-ಮೇಲ್ ಮೂಲಕ ಸಮುಚಿತ ಮಾರ್ಗದಲ್ಲಿ ಪಡೆಯುತ್ತೇವೆ. ಅದರ ಪರಿಶೀಲನೆ ನಂತರ ಅದನ್ನು ತನಿಖಾಧಿಕಾರಿಗಳು ಪಡೆದುಕೊಳ್ಳುತ್ತಾರೆ.

PW: 29 CW: 33

19) 2 ಮತ್ತು 3 ನೇ ಆರೋಪಿಗಳ ಮೊಬೈಲ್ ಗಳನ್ನು ವಶಪಡಿಸಿಕೊಂಡಾಗ ಪೊಟೋಗಳನ್ನು ತೆಗೆದಿರುತ್ತೇನೆ. 3 ನೇ ಆರೋಪಿ ಯಾವ ಮೊಬೈಲ್ ಉಪಯೋಗಿಸುತ್ತಿದ್ದ ಬಗ್ಗೆ ನಾನು ವರದಿ ನೀಡುವ ಸಮಯದಲ್ಲಿ ನನಗೆ ಮಾಹಿತಿ ಇರಲಿಲ್ಲ. ಸಿಡಿಅರ್ ಅನಾಲಿಸಿಸ್ ಮಾಡುವ ಸಮಯದಲ್ಲಿ 3 ನೇ ಆರೋಪಿಯ ಮೊಬೈಲ್ ಸಂಖ್ಯೆ ಯಾವುದು ಎಂದು ಮಾಹಿತಿ ಇತ್ತು. ನನ್ನ ವರದಿಯಲ್ಲಿ ಅದನ್ನು ನಮೂದಿಸದೇ ಇರುವ ಕಾರಣ ಅದು ಯಾವುದು ಎಂದು ಈಗ ನೆನಪಿಲ್ಲ. ಸದರಿ 3 ನೇ ಆರೋಪಿಯ ಮೊಬೈಲ್ ಸಂಖ್ಯೆ ಘಟನೆ ಸ್ಥಳದ ಸುತ್ತ ಮುತ್ತ ಕಾರ್ಯ ನಿರ್ವಹಿಸಿದ ಬಗ್ಗೆ ನನ್ನ ವರದಿಯಲ್ಲಿ ಹೇಳಿರುವುದಿಲ್ಲ. ಒಂದು ಟವರ್ ವ್ಯಾಪ್ತಿಯಲ್ಲಿ ಸಾವಿರಾರು ಮೊಬೈಲ್ ಸಂಖ್ಯೆಗಳು ಕಾರ್ಯನಿರ್ವಹಿಸುತ್ತವೆ ಎಂದರೆ ಸರಿ. ಮೊಬೈಲ್ ನಂಬರುಗಳ ಸಿಡಿಅರ್ ಗಳು ಪಡೆದರೆ ಅವು ನಿರ್ಧಿಷ್ಟ ಸಮಯದಲ್ಲಿ ಯಾವ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು ಎಂದು ಮಾಹಿತಿ ಸಿಗುತ್ತವೆ. ನನ್ನ ವರದಿಯಲ್ಲಿ ಹೇಳಿರುವ ಎಲ್ಲಾ ನಂಬರುಗಳು ಯಾರದು ಎಂದು ಅವು ಎಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು ಎಂದು ನನ್ನ ವರದಿಯಲ್ಲಿ ಹೇಳಿರುವುದಿಲ್ಲ , ಕೆಲವೊಂದು ಮಾತ್ರ ಹೇಳಿರುತ್ತೇನೆ. ಎಲ್ಲಾ ನಂಬರುಗಳು ಎಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು ವರದಿಯಲ್ಲಿ ತಿಳಿಸಲು ಯಾವುದೇ ತೊಂದರೆ ಇರಲಿಲ್ಲ , ಅದರ ಅವಶ್ಯಕತೆ ಇಲ್ಲದೆ ಇರುವ ಕಾರಣ ತಿಳಿಸಿರುವುದಿಲ್ಲ. ಈ ವಿಚಾರವನ್ನು ನನ್ನ ವರದಿಯಲ್ಲಿ ಹೇಳಲು ತೊಂದರೆ ಇರಲಿಲ್ಲ.

20) ನಾನು ಯಾವುದೇ ಸಿಡಿಅರ್ ಗಳನ್ನು ಅನಾಲೈಜ್ ಮಾಡಿಲ್ಲ, ಯಾವುದೇ ವರದಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯವನ್ನು ನಾನು ಕೊಟ್ಟ ವರದಿಯನ್ನು ನೋಡಿ ಹೇಳಿದ್ದೇನೆ , ಯಾವುದೇ ಅನಾಲೈಜ್ ಮಾಡಿಲ್ಲ ಎಂದರೆ ಸರಿಯಲ್ಲ.

PW: 29 CW: 33

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 01.12.2023 ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ

**ಸಹಿ/-**

ಮೂರನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.

PW: 29 CW: 33

PW: 29 CW: 33